ಶ್ರೀ ಡಿ. ದೇವರಾಜ ಅರಸ್ ಸಾರ್ವಜನಿಕ ಆಸ್ಪತ್ರೆ, ಹುಣಸೂರು ಮೈಸೂರು ಜಿಲ್ಲೆ ಇಲ್ಲಿನ ಸಿಬ್ಬಂದಿ ವರ್ಗದ ಮಾಹಿತಿ

ಕ್ರಮ ಸಂಖ್ಯೆ	ಹುದ್ದೆ ಹೆಸರು	ಮಂಜುರಾದ ಹುದ್ದೆ ಸಂ.	ಕರ್ತವ್ಯ ನಿರತ ಹುದ್ದೆ ಸಂ.	ಖಾಲಿ ಹುದ್ದೆ ಸಂಖ್ಯೆ: ಷರಾ
1)	ಮುಖ್ಯ ವೈದ್ಯಧಿಕಾರಿ (ಎದುರು ಹುದ್ದೆಯಲ್ಲಿ)	1	1	0
2)	ಪಿಜಿಶಿಯನ್	1	1	0
3)	ಪ್ರಸೂತಿ ತಜ್ಞರು	1	1	0'
4)	ಜನರಲ್ ಸರ್ಜರಿ	1	1	0
5)	ಅರಿವಳಿಕೆ ತಜ್ಞ	1	1	0
6)	ಮಕ್ಕಳ ತಜ್ಞ	1	1	0
7)	ಮೂಳೆ ತಜ್ಞ	1	1	0
8)	ಚರ್ಮರೋಗ ತಜ್ಞ	1	0	1
9)	ರೇಡಿಯಾಲಜಿಸ್ಟ್ (ಎದುರು ಹುದ್ದೆಯಲ್ಲಿ)	1	1	0
10)	ಇಎನ್‌ಟಿ ತಜ್ಞ	1	0	1
	ಒಟ್ಟು	10	8	2
11)	ದಂತ ವೈದ್ಯಾಧಿಕಾರಿ	1	1	0
12)	ಸಹಾಯಕ ಆಡಳಿತಾಧಿಕಾರಿ	1	1	0
13)	ನರ್ಸಿಂಗ್ ಸುಪರಿಂಟೆಂಡೆಂಟ್ ಗ್ರೇಡ್	1	0	1

171 ಶ್ರೀ ನರೇಂದ್ರಬಾಬು. ಎನ್.ಎಲ್.(ಮಹಾಲಕ್ಷ್ಮಿ ಲೇಔಟ್) :– ಮಾನ್ಯ ಆರೋಗ್ಯ ಮತ್ತು ಕುಟುಂಬಕಲ್ಯಾಣ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ರಾಜ್ಯದಲ್ಲಿ ಚಿಕುಂಗುನ್ಯ, ಡೆಂಗ್ಯೂ ಜ್ವರ/ಹಾವಳಿ ಎಲ್ಲೆಲ್ಲಿ ಸಂಭವಿಸಿದೆ (ವಿವರ ನೀಡುವುದು)

(ಆ) ಈ ಖಾಯಿಲೆಯಿಂದ ಈವರೆವಿಗೆ ಮೃತಪಟ್ಟವರ ಸಂಖ್ಯೆ ಎಷ್ಟು? (ವಿವರ ನೀಡುವುದು)

(ಇ) ಈ ಖಾಯಿಲೆಯನ್ನು ನಿರ್ಮೂಲನಗೊಳಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?

(ಈ) ಈ ಎರಡು ಖಾಯಿಲೆಗಳು ಬಾರದಂತೆ ಲಸಿಕೆ ಕಂಡು ಹಿಡಿಯಲಾಗಿದೆಯೇ?

ಉ) ಈ ಖಾಯಿಲೆಯಿಂದ ಮೃತಪಟ್ಟವರ ಕುಟುಂಬಗಳಿಗೆ ಪರಿಹಾರವನ್ನು ನೀಡಲಾಗಿದೆಯೇ?

ಊ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವತಿಯಿಂದ ಈ ಖಾಯಿಲೆಯನ್ನು ತಡೆಗಟ್ಟಲು ಯಾವ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳಲಾಗಿದೆ.?

ಶ್ರೀ ಬಿ.ಶ್ರೀರಾಮುಲು (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):-

(ಅ) ರಾಜ್ಯದಲ್ಲಿ ಇಲ್ಲಿಯವರೆಗೆ ಚಿಕುಂಗುನ್ಯ ರೋಗ 10 ಜಿಲ್ಲೆಗಳಲ್ಲಿ, (ಚಿಕ್ಕಬಳ್ಳಾಪುರ, ಹಾವೇರಿ, ಉತ್ತರ ಕನ್ನಡ, ಬೀದರ್, ಕೊಪ್ಪಳ, ಚಾಮರಾಜನಗರ, ಹಾಸನ, ಉಡುಪಿ, ಚಿಕ್ಕಮಗಳೂರು ಮತ್ತು ಕೊಡುಗು), ಡೆಂಗಿಜ್ವರ ರೋಗ 3 ಜಿಲ್ಲೆಗಳಲ್ಲಿ (ಚಿತ್ರದುರ್ಗ, ಗುಲ್ಬರ್ಗಾ, ಬಳ್ಳಾರಿ) ಹಾಗೂ ಚಿಕುಂಗುನ್ಯ ಮತ್ತು ಡೆಂಗಿಜ್ವರ ಎರಡೂ ರೋಗಗಳು ಇತರ 13 (ಬೆಂಗಳೂರು ನಗರ ಬೆಂಗಳೂರು ಗ್ರಾಮಾಂತರ, ರಾಮನಗರ, ಕೋಲಾರ, ತುಮಕೂರು, ದಾವಣಗೆರೆ, ಶಿವಮೊಗ್ಗ, ಬೆಳಗಾಂ, ಬಾಗಲಕೋಟೆ, ದಾರವಾಡ, ಗದಗ, ಮೈಸೂರು ಮತ್ತು ದಕ್ಷಿಣ ಕನ್ನಡ) ಜಿಲ್ಲೆಗಳಲ್ಲಿ ಹರಡಿರುವ ವರದಿಯಾಗಿರುತ್ತದೆ. ರಾಯಚೂರು, ಬಿಜಾಪುರ ಮತ್ತು ಮಂಡ್ಯ ಜಿಲ್ಲೆಗಳಲ್ಲಿ ಈ ಎರಡೂ ರೋಗಗಳು ಹರಡಿರುವ ವರದಿಯಾಗಿರುವುದಿಲ್ಲ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯ ರಾಜಾಜಿನಗರ, ಶ್ರೀರಾಮಪುರ, ಕಾಮಾಕ್ಷಿಪಾಳ್ಯ, ನಂದಿನಿ ಲೇಔಟ್, ಮಾಗಡಿ ರಸ್ತೆ, ಬಾಸ್ಯಂ ನಗರ ಪ್ರದೇಶಗಳಿಂದ ಚಿಕುಂಗುನ್ಯ ರೋಗಗಳು ವರದಿಯಾಗಿರುತ್ತದೆ.

ಆ) ರಾಜ್ಯದಲ್ಲಿ ಡೆಂಗ್ಯೂ ಖಾಯಿಲೆಯಿಂದ ಒಬ್ಬರು ಮೃತಪಟ್ಟಿರುತ್ತಾರೆ.

ಡೆಂಗಿಜ್ವರದಿಂದ ಮರಣ ಹೊಂದಿದ ರೋಗಿಯ ಹೆಸರು	ವಿಳಾಸ	ವಯಸ್ಸು/ ಲಿಂಗ	ರೋಗ ದೃಢೀಕರಿಸಿದ ಪ್ರಯೋಗಾಲಯ	ಮರಣ ಹೊಂದಿದ ದಿನಾಂಕ
ರಾಘವೇಂದ್ರ ಸತ್ಯಪ್ಪ ಪೂಜಾರ್	ನರಗುಂದ, ಪ್ರಾ.ಆ.ಕೇ. ಜಗಪುರ ಗದಗ ಜಿಲ್ಲೆ	11 ವರ್ಷ/ ಗಂಡು	ಗಿಖಒಖ ಬಳ್ಳಾರಿ	2-6-08

ಚಿಕುಂಗುನ್ಯ ಖಾಯಿಲೆಯಿಂದ ಯಾವುದೇ ಮರಣ ಸಂಭವಿಸಿರುವುದಿಲ್ಲ

ಇ) ಚಿಕುಂಗುನ್ಯ ಮತ್ತು ಡೆಂಗ್ಯೂಜ್ವರ ತಡೆಗಟ್ಟಲು ಮತ್ತು ನಿಯಂತ್ರಿಸಲು ಸರ್ಕಾರ ಕೈಗೊಂಡ ಕ್ರಮಗಳ ವಿವರ ಈ ಕೆಳಕಂಡಂತಿವೆ.

* ಚಿಕುಂಗುನ್ಯ ಡೆಂಗ್ಯೂಜ್ವರ ವರದಿಯಾಗಿರುವ ಜಿಲ್ಲೆಗಳಲ್ಲಿ, ಜಿಲ್ಲಾ ಆಸ್ಪತ್ರೆ, ಸಮುದಾಯ ಆರೋಗ್ಯ ಕೇಂದ್ರ, ಪ್ರಾಥಮಿಕ ಆರೋಗ್ಯ ಕೇಂದ್ರ ಮತ್ತು ಪ್ರಾಥಮಿಕ ಆರೋಗ್ಯ ಘಟಕಗಳಲ್ಲಿ ಅವಶ್ಯ ಔಷಧಿಗಳನ್ನು ಸಾಕಷ್ಟು ಪ್ರಮಾಣದಲ್ಲಿ ದಾಸ್ತಾನು ಇಡಲಾಗಿದೆ.

* ರೋಗವಾಹಕ ಸೊಳ್ಳೆಗಳ ನಿಯಂತ್ರಣಕ್ಕಾಗಿ ರೋಗ ಪೀಡಿತ ಪ್ರದೇಶಗಳಲ್ಲಿ ಪೈರಿತ್ರಮ್ ಎಕ್ಸ್ ಟ್ರಾಕ್ ಎಂಬ ಕೀಟನಾಶಕ ಬಳಸಿ ಒಳಾಂಗಣ ಧೋಮೀಕರಣ ಮಾಡಲಾಗುತ್ತಿದೆ. ಸೊಳ್ಳೆ ಉತ್ಪತ್ತಿ ನಿಂತ್ರಣಕ್ಕಾಗಿ ಟೆಮಿಫಾಸ್ ಎಂಬ ಕೀಟನಾಶಕ ದ್ರಾವಣದಿಂದ ಉಪಚರಿಸಲಾಗುತ್ತಿದೆ. ಈ ಕೀಟನಾಶಕಗಳನ್ನು ಎಲ್ಲಾ ಜಿಲ್ಲೆಗಳಿಗೂ ಈಗಾಗಲೇ ಸರಬರಾಜು ಮಾಡಲಾಗಿದೆ.

* ಜಿಲ್ಲಾ ಮಟ್ಟ, ತಾಲ್ಲೂಕು ಹಾಗು ಪ್ರಾ. ಆ ಕೇಂದ್ರ ಮಟ್ಟದಲ್ಲೂ ತ್ವರಿತ ಪ್ರಕ್ರಿಯಾ ತಂಡಗಳನ್ನು ಗುರುತಿಸಿ ಸ್ಥಾಪಿಸಲಾಗಿದೆ.

* ಈ ರೋಗಗಳ ಕಾರ್ಯ ನಿರ್ವಹಣೆಗೆ ರಾಜ್ಯ ಮತ್ತು ಜಿಲ್ಲಾ ಮಟ್ಟದಲ್ಲಿ ನೋಡಲ್ ಅಧಿಕಾರಿಗಳನ್ನು ನೇಮಿಸಲಾಗಿದ್ದು ಅವರು ಕಾಲಕಾಲಕ್ಕೆ ರೋಗ ಪೀಡಿತ ಪ್ರದೇಶಗಳಿಗೆ ಭೇಟಿ ನೀಡಿ ಕೈಗೊಂಡ ಕ್ರಮಗಳನ್ನು ಪರಿಶೀಲಿಸುತ್ತಿದ್ದಾರೆ.

* ಡೆಂಗ್ಯೂ ಮತ್ತು ಚಿಕುಂಗುನ್ಯ ರೋಗದ ಪತ್ತೆ ಹಾಗೂ ಧೃಡೀಕರಣ ಕಾರ್ಯವನ್ನು ತ್ವರಿತಗೊಳಿಸಲು ಕೇಂದ್ರ ಸರ್ಕಾರದ ಸಹಯೋಗದಲ್ಲಿ ರಾಜ್ಯದ 6 ಸ್ಥಳಗಳಾದ ಬೆಂಗಳೂರು ಕೋಲಾರ, ಶಿವಮೊಗ್ಗ, ದಕ್ಷಿಣ ಕನ್ನಡ, ಬೆಳಗಾಂ ಮತ್ತು ಬಳ್ಳಾರಿಗಳಲ್ಲಿ ರೋಗ ಸಮೀಕ್ಷಣಾ ಕಾವಲು ಕೇಂದ್ರಗಳನ್ನು ಸ್ಥಾಪಿಸಿ ಪರೀಕ್ಷಾ ಕಿಟ್ಟುಗಳನ್ನು ಸರಬರಾಜು ಮಾಡಲಾಗಿದೆ.

* ಈ ರೋಗಗಳ ನಿಯಂತ್ರಣ ಕಾರ್ಯಕ್ರಮಕ್ಕಾಗಿ 1500 ಗ್ರಾಮ ಪಂಚಾಯಿತಿಗಳನ್ನು ಗುರುತಿಸಿ ಆ ಪಂಚಾಯಿತಿ ಪರಿಮಿತಿಯಲ್ಲಿ ಬರುವ ಗ್ರಾಮಗಳಲ್ಲಿ ಸೊಳ್ಳೆ ಉತ್ಪತ್ತಿ ತಾಣಗಳನ್ನು ಗುರ್ತಿಸಿ, ನಿರ್ಮೂಲನೆ ಮಾಡಲು ತಂಡಗಳ ಮೂಲಕ ಕ್ರಮಕ್ಕೆಗೊಳ್ಳಲಾಗುತ್ತಿದೆ. ಹಾಗೂ ಪಂಚಾಯಿತಿ ಸದಸ್ಯರು ಮತ್ತು ಗ್ರಾಮದ ಇತರೆ ಮುಖಂಡರುಗಳನ್ನೊಳಗೊಂಡು ಮಾಹಿತಿ ಶಿಬಿರ ನಡೆಸಲಾಗಿದೆ.

* ಈ ರೋಗಗಳು ರಾಜ್ಯದ ಗಡಿ ಜಿಲ್ಲೆಗಳಾದ ದಕ್ಷಿಣ ಕನ್ನಡ, ಕೊಡಗು, ಮೈಸೂರುಗಳಲ್ಲಿ ವ್ಯಾಪಕವಾಗಿ ಹರಡಿರುವ ಹಿನ್ನೆಲೆಯಲ್ಲಿ ಕೇರಳ, ತಮಿಳುನಾಡು ಮತ್ತು ಕರ್ನಾಟಕ ಸೇರಿದಂತೆ ಅಂತರರಾಜ್ಯ ಸಭೆಯನ್ನು ದಿನಾಂಕ: 7.6.08 ಮತ್ತು 19.6.08ರಂದು ನಡೆಸಿದ್ದು ಗಡಿ ಭಾಗದ ಎರಡೂ ಕಡೆ ಸೂಕ್ತ ನಿಯಂತ್ರಣ ಕ್ರಮಗಳ ಬಗ್ಗೆ ಚರ್ಚಿಸಿ ಮುಂಜಾಗ್ರತಾ ಕ್ರಮ ತೆಗೆದುಕೊಳ್ಳಲಾಗಿದೆ.

* ಈ ರೋಗಗಳ ಬಗ್ಗೆ ಜನರಲ್ಲಿ ಜಾಗೃತ ಮೂಡಿಸಲು ಆರೋಗ್ಯ ಶಿಕ್ಷಣ ಚಟುವಟಿಕೆಗಳನ್ನು ವ್ಯಾಪಕವಾಗಿ ಹಮ್ಮಿಕೊಳ್ಳಲಾಗಿದೆ. ಇದಕ್ಕಾಗಿ ಕರಪತ್ರಗಳೂ, ಬಿತ್ತಿ ಪತ್ರಗಳು, ವಿತರಿಸಲಾಗಿದೆ. ದಿನಪತ್ರಿಕೆಗಳಲ್ಲಿ ಜಾಹಿರಾತು, ಆಕಾಶವಾಣಿಯಲ್ಲಿ ಸ್ಪಾಟ್‌ಗಳು ಮತ್ತು ಫೋನ್-ಇನ್-ಕಾರ್ಯಕ್ರಮಗಳನ್ನು ನಡೆಸಲಾಗಿದೆ.

* ರಾಜ್ಯಮಟ್ಟದ ಹಿರಿಯ ಅಧಿಕಾರಿಗಳು ಮತ್ತು ಪ್ರಾಂತೀಯ ನಿರ್ದೇಶಕರು, ಭಾರತ ಸರ್ಕಾರ ಇವರುಗಳು ಈ ರೋಗಪೀಡಿತ ಪ್ರದೇಶಗಳಿಗೆ ಭೇಟಿ ನೀಡಿ ರೋಗದ ಸ್ಥಿತಿಯ ಪರಿಶೀಲನೆ ನಡೆಸಿ ಸೂಕ್ತ ಕ್ರಮಕ್ಕೆಗೊಳ್ಳುವಂತೆ ಆದೇಶಿಸಿರುತ್ತಾರೆ.

ಈ) ಇಲ್ಲ.

ಉ) ಚುಕುಂಗುನ್ಯ ಖಾಯಿಲೆಯಿಂದ ಯಾವುದೇ ಮರಣ ಸಂಭವಿಸಿರುವುದಿಲ್ಲ. ಆರೋಗ್ಯ ಇಲಾಖೆವತಿಯಿಂದ ಚಿಕುಂಗುನ್ಯ ಡೆಂಗಯೂ ಜ್ವರ ಮರಣ ಹೊಂದಿದವರ ಕುಟುಂಬದವರಿಗೆ ಪರಿಹಾರ ನೀಡುವ ಅವಕಾಶ ಇರುವುದಿಲ್ಲ.

ಸೊಳ್ಳೆಗಳ ನಿಯಂತ್ರಣಕ್ಕೆ ಬೆಂಗಳೂರು ಮಹಾನಗರ ಪಾಲಿಕೆ ತೆಗೆದುಕೊಂಡಿರುವ ಕ್ರಮಗಳು

ಸೊಳ್ಳೆಗಳ ಹಾವಳಿ ವ್ಯಾಪಕ ನಿಯಂತ್ರಣಕ್ಕಾಗಿ "ರ್‍ಯಾಪಿಡ್ ರೆಸ್ಪಾನ್ಸ್ ಟೀಮ್ : ಹೆಸರಾಗಿರುತ್ತದೆ ಸದರಿ ತಂಡವು ಈ ಕೆಳಕಂಡ ಅಧಿಕಾರಿಗಳನ್ನೊಳಗೊಂಡಿರುತ್ತದೆ.

1) ವಲಯ ಆರೋಗ್ಯ ವೈದ್ಯಾಧಿಕಾರಿ

2) ಹಿರಿಯ ಮತ್ತು ಕಿರಿಯ ಆರೋಗ್ಯ ಪರಿವೀಕ್ಷಕರು

3) ಎಂಸಿ. ಮತ್ತು ಎಎಲ್‌ಓ ಗ್ಯಾಂಗಮನ್‌ಗಳು'

ಸದರಿ ತಂಡವು ತಮ್ಮ ವಲಯ ವ್ಯಾಪ್ತಿಗಳಲ್ಲಿ ಸೊಳ್ಳೆ ಲಾರ್ವ ನಿರ್ಮೂಲನಾ ಕಾರ್ಯಕ್ರಮ (ಸೋರ್ಸ್ ರಿಡೆಕ್ಷನ್) ಅಲ್ಲಿನ ಪರಿಸ್ಥಿತಿಗನುಗುಣವಾಗಿ ಸೊಳ್ಳೆ ಸಂತತಿ ನಾಶಕಪಡಿಸಲು ಲಾರ್ವ ನಾಶಕ ರಾಸಾಯನಕಗಳನ್ನು ಅಗತ್ಯಕ್ಕೆ ಅನುಗುಣವಾಗಿ ಆಧ್ಯತೆ ಮೇರೆಗೆ ಎಂಸಿ ಗ್ಯಾಂಗ್‌ಮನ್‌ಗಳನ್ನು ಉಪಯೋಗಿಸಿಕೊಂಡು ಸಿಂಪಡಣೆ ಕಾರ್ಯ ಮಾಡಲಾಗುತ್ತಿದೆ. ಪ್ರಕರಣಗಳ ಸಾಂದ್ರತೆಗೆ ಅನುಗುಣವಾಗಿ ದೂಮಿಕರಣ ಹಾಗೂ ಸೊಳ್ಳೆ ಉತ್ಪತ್ತಿ ನಿಯಂತ್ರಣಾ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

ಆರೋಗ್ಯ ಶಿಕ್ಷಣ: ಮಾಹಿತಿ ಶಿಕ್ಷಣ ಮತ್ತು ಸಂಪರ್ಕ ಅಭಿಯಾನದಡಿಯಲ್ಲಿ ಸಯಂ ಸೇವಾ ಸಂಸ್ಥೆಗಳನ್ನು ಉಪಯೋಗಿಸಿಕೊಂಡು ಮನೆ ಮನೆಗೆ ಕರ ಪತ್ರವನ್ನು ಹಂಚುವ ಮೂಲಕ ಸಾರ್ವಜನಿಕರಲ್ಲಿ ರೋಗ ನಿಯಂತ್ರಿಸಲು ಅರಿವು ಮೂಡಿಸುವ ಕಾರ್ಯವನ್ನು ಕೈಗೊಳ್ಳಲಾಗುತ್ತಿದೆ. ರೇಡಿಯೋ ಮತ್ತು ದೂರದರ್ಶನಗಳ ಮೂಲಕವೂ ಸಾರ್ವಜನಿಕರೊಂದಿಗೆ ನೇರಪ್ರಸಾರ ಕಾರ್ಯಕ್ರಮ ಏರ್ಪಡಿಸಿ ಸಾರ್ವಜನಿಕರಿಗೆ ಅಗತ್ಯ ಮುಜಾಗ್ರತಾ ಕ್ರಮಗಳ ಬಗ್ಗೆ ಅರಿವು ಮೂಡಿಸಲಾಗುತ್ತಿದೆ. ಜಾಥಾ ಕಾರ್ಯಕ್ರಮಗಳ ಮೂಲಕ ಅರಿವು ಮೂಡಿಸಲಾಗಿದೆ.

1) ಧರ್ಮಸ್ಥಳದ ಶ್ರೀ ಮಂಜುನಾಥೇಶ್ವರ ಆಯುರ್ವೇದ ಕಾಲೇಜು ಮತ್ತು ಆಸ್ಪತ್ರೆಯ ಹದಿನಾರು ಮಂದಿ ವೈದ್ಯರ ತಂಡ ನಗರದಲ್ಲಿ 7 ದಿವಸಗಳ ಕಾಲ ಬೀಡುಬಿಟ್ಟು ರೋಗ ಉಲ್ಬಣಗೊಂಡಿರುವ ಪ್ರದೇಶಗಳಲ್ಲಿ ಸೂಕ್ತ ವೈದ್ಯೋಪಚಾರ ನೀಡಿರುತ್ತಾರೆ.

2) ರೋಗ ಉಲ್ಬಣಗೊಂಡಿರುವ ಪ್ರದೇಶಗಳಲ್ಲಿ ಹೋಮಿಯೋಪತಿ ಚಿಕಿತ್ಸಾ ಶಿಬಿರಗಳನ್ನು ಹೋಮಿಯೋಪತಿ ಕಾಲೇಜುಗಳ ಸಹಯೋಗದೊಂದಿಗೆ ತೆರೆಯಲಾಗಿ ಸೂಕ್ತ ಚಿಕಿತ್ಸೆ ನೀಡಲಾಗುತ್ತಿರುತ್ತದೆ.

3) ಶಂಕಿತ ಚಿಕುಂಗುನ್ಯಾ ರೋಗದ ಚಿಕಿತ್ಸೆಗಾಗಿ ಪಾಲಿಕೆಯ ಎಲ್ಲಾ ಆಸ್ಪತ್ರೆಗಳಲ್ಲಿ ಸಹಾಯ ಕೇಂದ್ರ ತೆರೆಯಲಾಗಿ ಉಚಿತವಾಗಿ ವೈದ್ಯೋಪಚಾರ ನೀಡಲಾಗುತ್ತಿದೆ. ಪಾಲಿಕೆಯ ಎಲ್ಲಾ ಆಸ್ಪತ್ರೆಗಳಲ್ಲಿ ಅಗತ್ಯ ಔಷಧಗಳನ್ನು ದಾಸ್ತಾನು ನೀಡಲಾಗಿದೆ.

4) ಅನುಮಾನಸ್ಪದ ರೋಗಿಗಳ ರಕ್ತದ ಮಾದರಿಗಳನ್ನು ಸಂಗ್ರಹಿಸಿ ರಾಷ್ಟ್ರೀ ವೈರಾಣು ಸಂಸ್ಥೆಗೆ ಕಳುಹಿಸಲಾಗುತ್ತದೆ.

5) ಕೀಟ ಸಂಗ್ರಹಕಾರರ ಕಾರ್ಯವನ್ನು ಪರಿಶೀಲಿಸಿ ಎಲ್ಲೆಲ್ಲಿ ನೀರು ನಿಂತಿರುವುದೋ ಅಲ್ಲಿ ಸೊಳ್ಳೆ ಉತ್ಪತ್ತಿಯಾಗದಂತೆ ಸೊಳ್ಳೆಯ ಔಷಧಿಯನ್ನು ಸಿಂಪಡಿಸಲಾಗುತ್ತಿದೆ. ಹಾಗು ದೊಡ್ಡ ಮೋರಿಗಳಲ್ಲಿ ಎಎಲ್‌ಒ ಕಾರ್ಮಿಕರನ್ನು ಉಪಯೋಗಿಸಿಕೊಂಡು ನೀರು ನಿಲ್ಲದಂತೆ ಕ್ರಮ ತೆಗೆದುಕೊಳ್ಳಲಾಗುತ್ತಿದೆ.

6) ಮನೆಗಳ ಸುತ್ತ ಮುತ್ತ ಬಿಸಾಡಿದ ತ್ಯಾಜ್ಯ ವಸ್ತುಗಳಲ್ಲಿ ನೀರು ಸಂಗ್ರಹವಾಗದಂತೆ ಸಾರ್ವಜನಿಕರಿಗೆ ತಿಳಿಸುವುದು ಹಾಗೂ ಸಂಗ್ರಹವಾಗಿದ್ದಲ್ಲಿ ಅಂತಹ ವಸ್ತುಗಳನ್ನು ನಾಶಪಡಿಸಲು ಸೂಕ್ತರೀತಿಯಲ್ಲಿ ವಿಲೇವಾರಿ ಮಾಡುವಂತೆ ತಿಳಿಸಲಾಗುತ್ತಿದೆ.

7) ಟೈರಿನ ಮಾರಾಟಗಾರರು ಮತ್ತು ಹಳೆಟೈರಿನ ದಾಸ್ತಾನುಗಾರರು ಸಿಮೇಂಟ್ ಟ್ಯಾಂಕ್ ತಯಾರಿಸುವವರು, ಟಾರು ಡ್ರಮ್ಮುಗಳ ಶೇಖರಣೆ, ಇತರೆ ಖಾಲಿ ಡ್ರಮ್ಮುಗಳನ್ನು ನೀಡುವವರಿಗೆ ಇಂತಹ ವಸ್ತುಗಳಲ್ಲಿ ನೀರು ಶೇಖರಣೆಯಾಗದಂತೆ ಸೂಕ್ತ ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಳ್ಳಲು ತಿಳಿಸಿ, ಅದರಂತೆ ಅನುಷ್ಠಾನಗೊಳಿಸಲು ತಿಳಿಸಲಾಗುತ್ತಿದೆ.

8) ಸಿನಿಮಾ ಮಂದಿರಗಳಲ್ಲಿ ಇರಿಸಿರುವ ಬೆಂಕಿ ಆರಿಸುವ ಬಕೆಟ್ಟುಗಳಲ್ಲಿ ನೀರನ್ನು ವಾರಕ್ಕೊಮ್ಮೆ ತಪ್ಪದೆ ಖಾಲಿಮಾಡಿ ಮತ್ತೆ ಭರ್ತಿ ಮಾಡಲು ವ್ಯವಸ್ಥೆ ಮಾಡಲಾಗುತ್ತಿದೆ.

9) ಕಟ್ಟಡ ನಿರ್ಮಾಣ ಸ್ಥಳಗಳಲ್ಲಿ ಸಂಗ್ರಹವಾಗುವ ನೀರಿನ ತಾಣಗಳನ್ನು ಗುರುತಿಸಿ ರೋಗವಾಹನಕ ಸೊಳ್ಳೆಗಳು ಉತ್ಪತಿಯಾಗದಂತೆ ಸೂಕ್ತ ಕ್ರಮ ಕೈಗೊಳ್ಳಲಾಗುತ್ತಿದೆ.

10) ಸೀಮೆಂಟ್ ಅಥವಾ ಮಣ್ಣಿನ ತೊಟ್ಟಿಗಳಲ್ಲಿ ನೀರು ಸದಾ ಕಾಲ ಸಂಗ್ರಹವಾಗದಂತೆ ನೋಡಿಕೊಳ್ಳಲು ತಿಳಿಸಲಾಗುತ್ತಿದೆ.

11) ಮಹಾನಗರ ವ್ಯಾಪ್ತಿಯಲ್ಲಿ ಎಲ್ಲೆಲ್ಲಿ ಏಳನೀರು ಚಿಪ್ಪುಗಳು ಸಂಗ್ರಹಣೆವಾಗುತ್ತಿದೆಯೋ ಅವುಗಳನ್ನು ಕೂಡಲೆ ತೆಗೆಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಸೊಳ್ಳೆಗಳ ಹಾವಳಿ ನಿಯಂತ್ರಣದಲ್ಲಿ ಪ್ರತೀ ವಾರ್ಡಿಗೆ ಒಂದರಂತೆ ನೂರು ಫಾಗ್–ಜನರೇಟಿಂಗ್ ಯಂತ್ರಗಳನ್ನು ಖರೀದಿಸಿ ನಿಗದಿತ ಕಾರ್ಯಕ್ರಮದಂತೆ ದೂಮೀಕರಣ ಕಾರ್ಯವನ್ನು ನಿರ್ವಹಿಸಲಾಗುತ್ತಿದೆ. ಈ ಕಾರ್ಯಕ್ರಮದಿಂದಾಗಿ ಕೀಟಗಳಿಂದ ಹರಡುವ ಡೆಂಗ್ಯೂ ಮತ್ತು ಚಿಕುಂಗುನ್ಯಾ ರೋಗಗಳ ಹರಡುವಿಕೆಯನ್ನು ನಿಯಂತ್ರಿಸಲಾಗುತ್ತಿದೆ.

ಸೊಳ್ಳೆಗಳ ನಾಶಕ್ಕಾಗಿ ಔಷಧಿ ಸಿಂಪಡಿಸಲು ಬೆಂಗಳೂರು ಮಹಾನಗರ ಪಾಲಿಕೆ ಕೈಗೊಂಡಿರುವ ಕ್ರಮಗಳು

1) ಎಲ್ಲಾ ಆರೋಗ್ಯ ವಾರ್ಡುಗಳಲ್ಲಿ ನೀರು ನಿಂತಿರುವ ಪ್ರದೇಶಗಳಲ್ಲಿ ಸೊಳ್ಳೆಯ ಲಾರ್ವ ನಾಶಕವಾದ ಲಾರ್ವಿ ಸೈಡ್ಸ್‌ಗಳನ್ನು ವಹಿಕಲ್ ಮೌಂಟೆಡ್ ಸ್ಪ್ರೇಯರ್‌ಗಳ ಮುಖಾಂತರ ಪ್ರತೀ ದಿವಸವು ನಿಗಧಿಪಡಿಸಿರುವ ಕಾರ್ಯಕ್ರಮದಂತೆ ಲಾರ್ವ ನಾಶಕಗಳನ್ನು ಸಿಂಪಡಿಸಲಾಗುತ್ತಿದೆ. ಹಾಗೂ ಕೈ ಪಂಪುಗಳ ಮೂಲಕ ನಿಗದಿತ ಕಾರ್ಯಕ್ರಮದಂತೆ ಕೀಟನಾಶಕ ಸಿಂಪಡಿಸಲಾಗುತ್ತಿದೆ.

2) ಮುಂದುವರಿದ ಸೊಳ್ಳೆಗಳ ನಾಶಕ್ಕಾಗಿ ನಗರ ಮಲೇರಿಯ ಯೋಜನೆಯಡಿಯಲ್ಲಿ ಸೊಳ್ಳೆ ಲಾರ್ವ ನಾಶಕವಾದ ಟಿಮಿಫಾಸ ಪಂತಿಯಾನ್‌ಗಳನ್ನು ಸಾಕಾಗುವಷ್ಟು ದಾಸ್ತಾನು ನೀಡಲಾಗಿದೆ.

ಬಾಲಕರ ಬಾಲಕಿಯರ ವಸತಿ ನಿಲಯಗಳು

220 ಶ್ರೀ ಪಾಟೀಲ್ ಎ.ಎಸ್.(ನಡಹಳ್ಳಿ) (ದೇವರ ಹಿಪ್ಪರಗಿ) :– ಮಾನ್ಯ ಸಮಾಜ ಕಲ್ಯಾಣ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ಬಿಜಾಪುರ ಜಿಲ್ಲೆ, ದೇವರಹಿಪ್ಪರಗಿ ಕ್ಷೇತ್ರದ ವ್ಯಾಪ್ತಿಯಲ್ಲಿ ಪರಿಶಿಷ್ಟ ಜಾತಿ, ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖೆಯ ಮೆಟ್ರಿಕ್ ಪೂರ್ವ ಬಾಲಕರ:ಬಾಲಕಿಯರ ವಸತಿ ನಿಲಯಗಳ ಸಂಖ್ಯೆ ಎಷ್ಟು (ವಿವರ ನೀಡುವುದು.)

(ಆ) ಈ ಕ್ಷೇತ್ರ ವ್ಯಾಪ್ತಿಯಲ್ಲಿ ಪರಿಶಿಷ್ಟ ಜಾತಿ, ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖೆಯ ಮೆಟ್ರಿಕ್ ನಂತರದ ಬಾಲಕರ ಮತ್ತು ಬಾಲಕಿಯರ ವಿದ್ಯಾರ್ಥಿಗಳ ವಸತಿ ನಿಲಯಗಳೆಷ್ಟು (ವಿವರ ನೀಡುವುದು)

(ಇ) ಪ್ರಸಕ್ತ ಸಾಲಿನಲ್ಲಿ ಸಮಾಜ ಕಲ್ಯಾಣ ಇಲಾಖೆಯಿಂದ ಹೊಸದಾಗಿ ಮೆಟ್ರಿಕ್ ಪೂರ್ವ; ಮೆಟ್ರಿಕ್ ನಂತರ ವಿದ್ಯಾರ್ಥಿ ವಸತಿ ನಿಲಯಗಳನ್ನು ಮಂಜೂರು ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ (ವಿವರ ನೀಡುವುದು)